PAPERS LAID ON THE TABLE

Mr. DEPUTY SPEAKER.—Now Laying of papers.

Sri VEERENDRA PATIL.—I beg to lay on the Table the Annual Financial Statement of the Mysore State Electricity Board for the year 1968-69, as required under sub-section (3) of Section 61 of the Electricity (Supply) Act, 1948.

Members' Representations

ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಸ್ವಾಮಿ, ಪಬ್ಲಿಕ್ ವರ್ಕ್ಸ್ ಇಲಾಖೆಯ ಮಂತ್ರಿಗಳು ಈಗ ನಮ್ಮ ಮುಂದೆ ಮೈಸೂರು ಸ್ಟೇಟ್ ಎಲೆಕ್ಟ್ರಿಸಿಟಿ ಬೋರ್ಡಿನ 1968—69 ನೇ ವರ್ಷದ ಆನ್ಯುಯಲ್ ಫೈನಾನ್ಸಿಯಲ್ ಸ್ಟೇಟ್‌ಮೆಂಟ್‌ನ್ನು ಎಲೆಕ್ಟ್ರಿಸಿಟಿ ಆಕ್ಟ್ ಪ್ರಕಾರ ಈ ಸಭೆಯ ಮುಂದೆ ಇಟ್ಟಿದ್ದಾರೆ. 1968—69 ನೇ ವರ್ಷದ ಬಜೆಟ್ಟನ್ನು ಏಪ್ರಿಲ್ ತಿಂಗಳಿನಲ್ಲಿ ಸಭೆಯಮುಂದೆ ಇಡುತ್ತಿದ್ದಾರೆ. ಇದನ್ನು ಸಭೆ ಚರ್ಚೆ ಮಾಡಬೇಕಾದುದು ಈ ಆಕ್ಟಿನ ಉದ್ದೇಶ. ಇದುವರೆಗೆ ಕೂಡ ಇಲೆಕ್ಟ್ರಿಸಿಟಿ ಬೋರ್ಡಿನ ಆಯವ್ಯಯ ಎರಡು ವರ್ಷ ಚರ್ಚೆಯಾಗಿಲ್ಲ. ನಾನು ಸಭಾಪತಿಗಳ ಮುಖಾಂತರ ಒಂದು ಮಾತು ಕೇಳುತ್ತೇನೆ. ಈ ಸಭೆ ಇದನ್ನು ಚರ್ಚೆ ಮಾಡತಕ್ಕಂಥಾದ್ದು ಕಾನ್‌ಸ್ಟಿಟೂಷನರ್ ಆಬ್ಲಿಗೇಷನ್ ಇದೆ. ಸಭೆ ಚರ್ಚೆ ಮಾಡಬೇಕು ಎಂದು ಇದನ್ನು ಸಭೆಯ ಮುಂದೆ ಇಡುತ್ತಿದ್ದೀರಾ ಅಥವಾ ಅದನ್ನು ಅಲ್ಲಿಯೇ ಕೈ ಬಿಡುತ್ತೀರಾ ! ಇದರ ಬಗ್ಗೆ ಕೊನೆಯ ತೀರ್ಮಾನ ಏನು ಎನ್ನುವುದನ್ನು ಈ ಸಭೆಯಲ್ಲಿ ಹೇಳಬೇಕು ಎಂದು ನಮ್ಮ ಮುಖಾಂತರ ವಿಚಾರಿಸುತ್ತೇನೆ.

Mr. DEPUTY SPEAKER.—It will be discussed and the Business Advisory Committee will decide it.

ಶ್ರೀ ಎಚ್. ಸಿದ್ದವೀರಪ್ಪ.—ಇದರ ಜೊತೆಗೆ ಇನ್ನೊಂದು ವಿಷಯ ಸ್ಟೇಟ್ ಕಾರ್ಪೊರೇಷನ್ ಬಗ್ಗೆ ಹೇಳುವುದು ಪ್ರಕೃತವಾಗಿದೆ ಎಂದು ಈ ಸಮಯದಲ್ಲಿ ಸರಕಾರದ ಗಮನಕ್ಕೆ ತರಲು ಇಚ್ಛೆ ಪಡುತ್ತೇನೆ. ನಮ್ಮ ರಾಜ್ಯದಲ್ಲಿ ಅನೇಕ ಕಾರ್ಪೊರೇಷನ್ನುಗಳು ಇವೆ, ಅವುಗಳಲ್ಲಿ ಕೋಟ್ಯಾಂತರ ರೂಪಾಯಿ ಬಂಡವಾಳ ತೊಡಗಿಸಿದ್ದೀರಿ. ಅವುಗಳ ರಿಪೋರ್ಟ್ ಬಂದಾಗ್ಗೆ ಅದರ ವಿಷಯದ ಬಗ್ಗೆ ಈ ಸಭೆ ತನ್ನ ಅಭಿಪ್ರಾಯ ವ್ಯಕ್ತಪಡಿಸುತ್ತದೆ ಎನ್ನತಕ್ಕಂಥ ವಿಚಾರ ಹೇಳಲಿಲ್ಲ ಹಾಗೂ ಅದಕ್ಕೆ ಇದುವರೆಗೆ ಅವಕಾಶ ಸಿಕ್ಕಿಲ್ಲ. ರೋಡ್ ಟ್ರಾನ್ಸ್‌ಪೋರ್ಟ್ ಒಂದನ್ನು ಬಿಟ್ಟರೆ ಉಳಿದವುಗಳ ಬಗ್ಗೆ ಡಿಮ್ಯಾಂಡ್ಸ್ ಚರ್ಚೆಗೆ ಬಂದಾಗ್ಗೆ ಮಾತನಾಡಿದ್ದೇವೆ. ಭದ್ರಾವತಿ ಕಾರ್ಖಾನೆ ಬಗ್ಗೆ ಮಾತನಾಡಿದ್ದೇವೆ. ಈ ಕಾರ್ಪೊರೇಷನ್ ವಿಷಯದಲ್ಲಿ ಅನೇಕ ವಿಷಯ ಇರತಕ್ಕಂಥಾದ್ದನ್ನು ಒಳಗೆ ಇದ್ದುದನ್ನು ಹೊರಗೆ ತರಲು ನಮಗೆ ಅವಕಾಶವಿಲ್ಲ. ಕೆಲವು ಕಾರ್ಪೊರೇಷನ್ ರಿಪೋರ್ಟ್‌ಗಳು ಕಾಲ ಕಾಲಕ್ಕೆ ಬರುತ್ತಿಲ್ಲ. ಅವುಗಳ ರಿಪೋರ್ಟ್ ಬಂದಾಗ್ಗೆ ಈ ಸಭೆಯ ಮುಂದೆ ಮಂಡಿಸಿ ಅದರ ಬಗ್ಗೆ ಸಭೆಯ ಅಭಿಪ್ರಾಯ ಹೇಳುವುದಕ್ಕೆ ಅವಕಾಶ ಮಾಡಿ ಕೊಡಬೇಕು ಅದು ಅತ್ಯಾವಶ್ಯಕವಾಗಿದೆ ಎಂದು ಸರಕಾರಕ್ಕೆ ತಾವು ಸೂಚನೆ ಕೊಡಬೇಕು ಎಂದು ನಾನು ಹೇಳಬಯಸುತ್ತೇನೆ.

Mr. DEPUTY SPEAKER.—I will Consider.

ಶ್ರೀ ವಾಟಾಳ್ ನಾಗರಾಜ್ (ಚಿಕ್ಕಪೇಟೆ).—ಗಡಿ ವಿವಾದದ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳಾದ ನಿಜಲಿಂಗಪ್ಪನವರು ಬೊಂಬಾಯಿನಲ್ಲಿ ಪತ್ರಿಕಾ ಪ್ರತಿನಿಧಿಗಳಿಗೆ ಹೇಳಿರುವ ವಿಚಾರ ಪ್ರತಿಕೆಗಳಲ್ಲಿ ಬಂದಿರುವುದನ್ನು ನೋಡಿದರೆ ಇವರು ಮಹಾಜನ್ ವರದಿಯನ್ನು ಮರೆತಿದ್ದಾರೆಯೋ ಏನೋ ಎನ್ನುವ ರೀತಿಯಲ್ಲಿ ಭಾಸವಾಗುತ್ತದೆ. ಮಾನ್ಯ ಮುಖ್ಯ ಮಂತ್ರಿಗಳು ಸಭೆಯಲ್ಲದ್ದಾರೆ. ಮಹಾಜನ್ ವರದಿ ಏನಾಯಿತು, ಅದೇನಾದರೂ ಮೂಲೆಗೆ ಹೋಯಿತೇ, ಯಾವ ರೀತಿಯಲ್ಲಿ ವಿವಾದ ಪರಿಹಾರವಾಗುತ್ತದೆ ಎನ್ನುವ ಬಗ್ಗೆ ಒಂದು ವಿವರಣೆಯನ್ನು ಮಾನ್ಯ ಮುಖ್ಯ ಮಂತ್ರಿಗಳು ಕೊಡಬೇಕು.

ಉಪಾಧ್ಯಕ್ಷರು.—ಇದಕ್ಕೆ ಸಂಬಂಧಪಟ್ಟಂತೆ ಮಾನ್ಯ ಸದಸ್ಯರು ಒಂದು ನೋಟೀಸ್ ಕೊಟ್ಟಿದ್ದಾರೆ. ಅದನ್ನು ಸೋಮವಾರ ತೆಗೆದುಕೊಳ್ಳುತ್ತೇನೆಂದು ಹೇಳಿದ್ದೇನೆ. ಈಗ ಅದರಮೇಲೆ ಮಾತನಾಡುವುದಕ್ಕೆ ಹೊರಡುವುದು ಸರಿಯಲ್ಲ.

ಶ್ರೀ ವಾಟಾಳ್ ನಾಗರಾಜ್.—ಇದೇ ಸಭೆಯಲ್ಲಿ ಮಹಾಜನ್ ವರದಿಯನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳಬೇಕೆಂದು ತೀರ್ಮಾನವಾಯಿತು. ಆದರೆ ಮಾನ್ಯ ಮುಖ್ಯ ಮಂತ್ರಿಗಳು ಬೊಂಬಾಯಿಗೆ ಹೋದಾಗ ಗಡಿ ವಿವಾದದ ಬಗ್ಗೆ ತಮ್ಮ ಶಕ್ತಿ ಮೀರಿ ಶ್ರಮಿಸುವುದಾಗಿಯೂ ಅದನ್ನು ಹೇಗೆ ಮಾಡುತ್ತೇನೆ ಯಾವಾಗ ಮಾಡುತ್ತೇನೆ ಎನ್ನುವುದನ್ನು ಈಗ ಹೇಳುವುದಕ್ಕೆ ಸಾಧ್ಯವಿಲ್ಲವೆಂಬುದಾಗಿಯೂ ಹೇಳಿದ್ದಾರೆ. ಮಹಾಜನ್ ವರದಿ ಏನಾಯಿತು ಎನ್ನುವುದನ್ನು ಅವರು ತಿಳಿಸುತ್ತಾರೆಯೇ ಸ್ವಾಮಿ ?

ಶ್ರೀ ಸಿ. ಕೆ. ರಾಮಯ್ಯ ಶೆಟ್ಟಿ (ಚಿಕ್ಕನಾಯಕನಹಳ್ಳಿ).—ಮಾನ್ಯ ಸಭೆಯ ಅಧ್ಯಕ್ಷರಿಗೆ ಮೂರು ದಿವಸಗಳ ಕೆಳಗೆ ಮದ್ರಾಸಿನಲ್ಲಿ ಆಪರೇಷನ್ ಆಗಿದೆ ಎಂದು ಪತ್ರಿಕೆಗಳಲ್ಲಿ ಓದಿದೆ. ಅವರ ಆರೋಗ್ಯ ಹೇಗಿದೆ ಎನ್ನುವುದು ಗೊತ್ತಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಆ ವಿಷಯವನ್ನು ಸಭೆಗೆ ತಿಳಿಸಬೇಕೆಂದು ಕೇಳುತ್ತೇನೆ.

ಶ್ರೀ ಎಸ್. ನಿಜಲಿಂಗಪ್ಪ (ಮುಖ್ಯಮಂತ್ರಿಗಳು).—ಮಾನ್ಯ ಶೆಟ್ಟರು ನನ್ನ ಹತ್ತಿರ ಬಂದಿದ್ದರೆ ಹೇಳುತ್ತಿದ್ದೆ. ನಮ್ಮ ಸಭೆಯ ಅಧ್ಯಕ್ಷರಿಗೆ ಆಪರೇಶನ್ ಆಗಿದೆ, ಅವರು ಗುಣಮುಖರಾಗುತ್ತಿದ್ದಾರೆ ಎನ್ನುವುದು ಸಂತೋಷದ ಮಾತು.

ಮಹಾಜನ್ ವರದಿ ಈಗ ಕೇಂದ್ರ ಸರ್ಕಾರದ ಮುಂದೆ ಇದೆ. ಕೇಂದ್ರ ಸರ್ಕಾರದವರು ಆ ವಿಚಾರದಲ್ಲಿ ಪಾರ್ಲಮೆಂಟಿನಲ್ಲಿ ಒಂದು ಮಸೂದೆಯನ್ನ ತರಬೇಕಾಗಿತ್ತು. ಅವರು ಹಾಗೆ ಮಾಡಲೊಲ್ಲದೆ ಎಲ್ಲ ಪಕ್ಷಗಳ ಮುಖಂಡರ ಅಭಿಪ್ರಾಯವನ್ನು ತೆಗೆದುಕೊಳ್ಳಬೇಕು ಎಂದು ಮುಂದೂಡುತ್ತಿದ್ದಾರೆ. ಇದನ್ನು ಆದಷ್ಟು ಬೇಗ ಫೈನಲೈಸ್ ಮಾಡಬೇಕು ಎಂದು ನಾವು ಕೇಂದ್ರಕ್ಕೆ ಕಾಗದವನ್ನು ಬರೆದಿದ್ದೇವೆ. ಮಹಾಜನ್ ವರದಿಯಲ್ಲಿರುವ ಸಿಫಾರಸುಗಳ ಪ್ರಕಾರ ಲೋಕಸಭೆಯಲ್ಲಿ ಒಂದು ಮಸೂದೆಯನ್ನು ತರಬೇಕಾದ್ದು ಅವರ ಕರ್ತವ್ಯ. ಅದನ್ನು ಅವರು ಮಾಡದೆ ಮುಖಂಡರನ್ನು ಸೇರಿಸಿ ಮಾತನಾಡುತ್ತೇವೆಂದು ಹೇಳಿ ಅದರಲ್ಲಿ ಕಾಲ ಕಳೆಯುತ್ತಿದ್ದಾರೆ. ಇರುವ ವಿಚಾರ ಇಷ್ಟು. ನಾವು ಮಾಡುವ ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ.

Mr. DEPUTY SPEAKER.—Hon'ble Food Minister will now reply.

STATEMENT OF THE CHIEF MINISTER ABOUT HIS DUAL ROLE

ಶ್ರೀ ಎಸ್. ನಿಜಲಿಂಗಪ್ಪ.—ಸ್ವಾಮಿ, ಮುಂದಿನ ವಿಷಯಕ್ಕೆ ಹೋಗುವ ಮೊದಲು ನಾನು ಮುಖ್ಯ ಮಂತ್ರಿಯಾಗಿ ಮುಂದುವರಿಯುತ್ತಿರುವ ವಿಚಾರದಲ್ಲಿ ಒಂದು ಮಾತನ್ನು ಹೇಳಲು ಅಪೇಕ್ಷಿಸುತ್ತೇನೆ. ನಿನ್ನೆಯ ದಿವಸ ನಾನು ಬೊಂಬಾಯಿನಲ್ಲಿ ಏನೋ ಹೇಳಿಕೆಯನ್ನು ಕೊಟ್ಟು ಬೇರೆ ಬೇರೆ ಹೇಳುತ್ತಿದ್ದೇನೆ ಎಂದು ಪತ್ರಿಕೆಗಳಲ್ಲಿ ಬಂದಿದೆ ಎಂಬುದಾಗಿ ಅದರ ಬಗ್ಗೆ ಅನೇಕ ಜನ ಮಾತನಾಡಿದ್ದಾರೆ. ಅವರೆಲ್ಲ ಏನು ಹೇಳಿದ್ದಾರೆ ಎನುವುದಕ್ಕೆ ಉತ್ತರವನ್ನು ಕೊಡವುದಕ್ಕೆ ನಾನು ಹೋಗುವುದಿಲ್ಲ. ನಾಲ್ಕೈದು ದಿವಸಗಳ ಕೆಳಗೆ ಒಂದು ಪತ್ರಿಕೆಯನ್ನು ವಿರೋಧಪಕ್ಷದ ನಾಯಕರಾದ ಶಿವಪ್ಪನವರು ತೆಗೆದುಕೊಂಡು ಬಂದು ನನಗೆ ತೋರಿಸಿ ಅದರ ಬಗ್ಗೆ ನಾನು ಜವಾಬ್ದಾರಿಯಿಂದ ಏನು ಹೇಳುತ್ತೇನೆಂದು ಕೇಳಿದರು. ನಾನು ಬೊಂಬಾಯಿಗೆ ಹೋಗಿದ್ದ ಕಾಲದಲ್ಲಿ ಅಲ್ಲಿ ನಾನಾ ರೀತಿಯಿಂದ ಈ ವಿಚಾರದ ಬಗ್ಗೆ ಕೇಳಿದರು. ಮುಖ್ಯ ಮಂತ್ರಿ ಪದವಿಯನ್ನು ಬಿಟ್ಟು ಹೋಗುತ್ತೇನೆ, ಆದರೆ ಯಾವಾಗ ಬಿಟ್ಟು ಹೋಗುತ್ತೇನೆಂಬುದು ಇನ್ನೂ ತೀರ್ಮಾನವಾಗಿಲ್ಲ ಎಂದು ಹೇಳಿದೆ. ಈ ಸಭೆಯಲ್ಲಿ ನಾನು ಸ್ಪಷ್ಟವಾಗಿ ಹೇಳಿದ್ದೇನೆ, ಅನುಮಾನ ಮಾಡಬೇಕಾಗಿಲ್ಲ. ಪತ್ರಿಕೆಗಳಲ್ಲಿ ಬರೆದಿರುವುದನ್ನು ನೋಡಿಕೊಂಡು ಇಲ್ಲಿ ಕೇಳಿದರೆ ಏನು ಹೇಳಲಿ.....

ಶ್ರೀ ಎಸ್. ಚನ್ನಯ್ಯ (ಕೃಷ್ಣರಾಜ).—ಒಂದು ಪತ್ರಿಕೆಯಲ್ಲಿ ಮಾತ್ರ ಬಂದಿಲ್ಲ ಸ್ವಾಮಿ. ನಾವು ಎಂಟು ಹತ್ತು ಪತ್ರಿಕೆಗಳನ್ನು ಓದಿ ನೋಡಿದ್ದೇವೆ. ಅವುಗಳನ್ನು ತಮ್ಮ ಮುಂದೆಯೂ ಇಟ್ಟಿದ್ದೇವೆ. ಪತ್ರಿಕೆಗಳಲ್ಲಿ ಬಂದಿರುವುದೆಲ್ಲ ನಿಜ.